ಶ್ರೀ ಎಚ್.ಡಿ. ಬಸವರಾಜ್ : ಇನ್ನೊಂದು, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದುದು ಇದೆ.

ಅಧ್ಯಕ್ಷರು : ತಿರುಪತಿಗೆ ಬಸ್ ಕೇಳಿ, ಈಗ ನನ್ನ ಕ್ಷೇತ್ರಕ್ಕೆ ಅಂದರೆ ....

ಶ್ರೀ ಎಚ್.ಡಿ. ಬಸವರಾಜ್ : ತಿರುಪತಿಯ ಬಸ್ಸಿನ ಬಗ್ಗೆಯೇ ಹೇಳುತ್ತೇನೆ. ನಾನು ಬೇರೆಯವರ ಬಗ್ಗೆ ಹೇಳಲು ಹೋಗುತ್ತಿಲ್ಲ. ನನ್ನ ವಿರಾಜಪೇಟೆ ಕ್ಷೇತ್ರದಲ್ಲಿರುವ ಪುಟ್ಟ ಭಾಗದಿಂದ ತಿರುಪತಿಗೆ ಒಂದು ಬಸ್ಸನ್ನು ಓಡಿಸುವ ವ್ಯವಸ್ಥೆ ಬಗ್ಗೆ ಸಾರಿಗೆ ಸಚಿವರಿಗೆ ಮನವಿ ಸಲ್ಲಿಸಲಾಗಿದೆ. ಅದರ ಬಗ್ಗೆ ಸಚಿವರು ಏನು ಉತ್ತರ ಹೇಳುತ್ತಾರೆ ಅದನ್ನು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಪ್ರಯತ್ನಗಳು ನಿರಂತರ. ಆ ಪ್ರಯತ್ನವನ್ನೂ ಸಹಿತ ನಾನು ಮಾಡುತ್ತೇನೆ.

ರಸ್ತೆ ಕ್ಷೇಮಾಭಿವೃದ್ಧಿ ನಿಧಿ

179 - ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಪಘಾತದಲ್ಲಿ ಮೃತಪಡುವ ಬಸ್ಸು, ಲಾರಿ, ಟೆಂಪೋ ಹಾಗೂ ಮ್ಯಾಕ್ಸಿ ಕ್ಯಾಬ್ ಚಾಲಕರ "ರಸ್ತೆ ಕ್ಷೇಮಾಭಿವೃದ್ಧಿ ನಿಧಿಯನ್ನು" ವಿಸ್ತರಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಯೋಜನೆಯನ್ನೇನಾದರೂ ರೂಪಿಸಿದೆಯೇ;

ಇ) ಈ ಯೋಜನೆ ಎಂದಿನಿಂದ ಜಾರಿಗೆ ಬರಲಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) :

ಅ), ಆ) ಮತ್ತು ಇ) ಹೌದು. ಸರ್ಕಾರವು ಆಟೋರಿಕ್ಷಾ ಚಾಲಕರಿಗಾಗಿ ಅಪಘಾತ ಪರಿಹಾರ ಯೋಜನೆಯನ್ನು ಈಗಾಗಲೇ ಜಾರಿಗೆ ತಂದಿದೆ. ಲಾರಿಗಳು, ಟ್ಯಾಕ್ಸಿಗಳು, ಮ್ಯಾಕ್ಸಿ ಕ್ಯಾಬುಗಳು, ಟ್ರಾಕ್ಟರುಗಳು ಮುಂತಾದ ಸಾರಿಗೆ ವಾಹನಗಳ ಚಾಲಕರು ಹಾಗೂ ಕ್ಲೀನರುಗಳು ಅಪಘಾತದಲ್ಲಿ ಮೃತರಾದರೆ ಅಥವಾ ಖಾಯಂ ಆಗಿ ಅಶಕ್ತರಾದರೆ ಅಂಥವರ ಕುಟುಂಬಗಳ ಕಷ್ಟಕಾರ್ಪಣ್ಯಗಳನ್ನು ಕಡಿಮೆ ಮಾಡಲು ಸರ್ಕಾರವು ಅಂಥವರಿಗೂ ಈ ಅಪಘಾತ ಪರಿಹಾರ ಯೋಜನೆಯನ್ನು ವಿಸ್ತರಿಸಲು ಉದ್ದೇಶಿಸಿದೆ. 50 ಸಾವಿರ ರೂಪಾಯಿವರೆಗೆ ಪರಿಹಾರ ನೀಡಲು ಒಂದು ಪ್ರತ್ಯೇಕ ನಿಧಿಯನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆ. ಯೋಜನೆಯನ್ನು 1997-98ರ ಆರ್ಥಿಕ ವರ್ಷದಿಂದ ಜಾರಿಗೆ ತರಲಾಗುವುದು.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಅಪಘಾತದಲ್ಲಿ ಮೃತಪಡುವ ಬಸ್, ಲಾರಿ, ಟೆಂಪೋ ಹಾಗೂ ಮ್ಯಾಕ್ಸಿ ಕ್ಯಾಬ್ ಚಾಲಕರ "ರಸ್ತೆ ಕ್ಷೇಮಾಭಿವೃದ್ಧಿ ನಿಧಿಯನ್ನು" ಸುಮಾರು ಐವತ್ತು ಸಾವಿರಕ್ಕೆ ನಿಗದಿಪಡಿಸಲಾಗುತ್ತದೆ ಎಂದು ಹೇಳಿದ್ದಾರೆ. ಮಾನವೀಯತೆಯ

ದೃಷ್ಟಿಯಿಂದ ಚಾಲಕರು ಒಂದು ವೇಳೆ ಮೃತಪಟ್ಟರೆ 50 ಸಾವಿರ ರೂಪಾಯಿಗಳ ರಸ್ತೆ ಕ್ಷೇಮಾಭಿವೃದ್ಧಿ ನಿಧಿಯನ್ನು ನಿಗದಿ ಮಾಡಲು ಸರ್ಕಾರ ಒಪ್ಪಿಕೊಳ್ಳುತ್ತದೆಯೇ? ಎರಡನೆಯದಾಗಿ, ಈ ಅಪಘಾತಗಳನ್ನು ತಪ್ಪಿಸುವುದಕ್ಕೋಸ್ಕರ ತರಬೇತಿ ಅವಧಿಯನ್ನು ಜಾಸ್ತಿ ಮಾಡುತ್ತೀರೋ? ಮತ್ತೆ ಯಾರು ಕುಡಿದು ಡ್ರೈವಿಂಗ್ ಮಾಡುತ್ತಾರೆ ಅಂಥವರ ಡ್ರೈವಿಂಗ್ ಲೈಸೆನ್ಸ್ ಅನ್ನು ಶಾಶ್ವತವಾಗಿ ರದ್ದು ಮಾಡುವುದಕ್ಕೆ ಕಾನೂನಿನಲ್ಲಿ ಏನಾದರೂ ಅವಕಾಶವನ್ನು ಕಲ್ಪಿಸುತ್ತೀರೋ? ಈ ವಿಚಾರಗಳಿಗೆ ದಯವಿಟ್ಟು ಉತ್ತರಿಸಬೇಕೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ ಮೊದಲನೆಯದಾಗಿ, ಕಳೆದ ವರ್ಷ ಮಾನ್ಯ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ರಾಜ್ಯದಲ್ಲಿರುವಂತಹ ಒಂದು ಆಟೋ ರಿಕ್ಷಾ ಚಾಲಕರ ಕ್ಷೇಮಾಭಿವೃದ್ಧಿ ನಿಧಿಯನ್ನು ಪ್ರಾರಂಭ ಮಾಡಿ, ಅವರು ಆಟೋ ರಿಕ್ಷಾ ಚಾಲನೆ ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ಅಪಘಾತಗಳಾಗಿ ಸತ್ತರೆ ಅವರ ಕುಟುಂಬವರ್ಗದವರಿಗೆ ಐವತ್ತು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುವ ಯೋಜನೆ ಇಡೀ ದೇಶದಲ್ಲಿಯೇ ಇಲ್ಲದಿರತಕ್ಕಂಥ ಒಂದು ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು. ಕಳೆದ ವರ್ಷ ಪ್ರಾರಂಭ ಮಾಡಿದ್ದು, ಅದು ಈಗ ಚಾಲ್ತಿಯಲ್ಲಿದೆ. ಈ ವರ್ಷ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ಆಯವ್ಯಯದಲ್ಲಿ, ಆಟೋರಿಕ್ಷಾ ಚಾಲಕರಿಗೆ ಮಾತ್ರವಿದ್ದ ಈ ಒಂದು ಯೋಜನೆಯನ್ನು ತಾವು ಹೇಳಿದ ಹಾಗೆ ಲಾರಿ ಚಾಲಕರಿಗೆ, ಇತರೆ ವರ್ಗಗಳ ಚಾಲಕರಿಗೂ ಕೂಡ, ಖಾಸಗಿ ಕ್ಷೇತ್ರದಲ್ಲಿರುವ ಚಾಲಕರಿಗೂ ಕೂಡ, ಖಾಸಗಿ ಬಸ್‌ಗಳು, ಮೆಟೊಡರ್ ವ್ಯಾನ್‌ಗಳು ಮತ್ತು ಲಾರಿಗಳು, ಖಾಸಗಿ ಲಾರಿಗಳ ಚಾಲಕರು, ಇವರೆಲ್ಲರಿಗೂ ಕೂಡ ಅನ್ವಯವಾಗುವ ರೀತಿಯಲ್ಲಿ ಈ ಒಂದು ಯೋಜನೆಯನ್ನು ವಿಸ್ತರಿಸಿದ್ದಾರೆ ಎಂದು ನಾನು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಇದನ್ನು ನಾವು ಪ್ರಯತ್ನ ಮಾಡೋಣ. ಇದನ್ನು ಹೆಚ್ಚಿಗೆ ಮಾಡಿ ಕ್ಲಿನರ್ಸ್‌ಗೂ ಅನ್ವಯ ಮಾಡಬೇಕೆಂದು ಹೇಳಿದ್ದಾರೆ, ಈ ಕಾರ್ಯಕ್ರಮವನ್ನು ಈ ವರ್ಷ ಈಗತಾನೆ ಪ್ರಾರಂಭ ಮಾಡಿದ್ದೇವೆ. ಇದಾದ ನಂತರ, ಮುಂದಿನ ವರ್ಷ ನೋಡೋಣ, ಈ ವರ್ಷ ಇದು ಕಷ್ಟವಾಗಬಹುದು. ಇದನ್ನು ಕ್ಲೀನರ್ಸ್‌ಗೂ ಕೂಡ ವಿಸ್ತಾರ ಮಾಡಬೇಕೆನ್ನುವ ವಿಚಾರವನ್ನು ಹೇಳಿದ್ದೀರಿ, ಇದು ಸ್ವಲ್ಪ ಕಷ್ಟವಾಗುತ್ತದೆ. ಮೂರನೆಯದಾಗಿ ಈ ಅಪಘಾತಗಳನ್ನುಕಡಿಮೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದಾರೆ, ಇದು ಪ್ರತ್ಯೇಕವಾದ ಪ್ರಶ್ನೆಯಾಗುತ್ತದೆ. ಆದರೂ ಕೂಡ ನಾನು ಹೇಳುತ್ತಿದ್ದೇನೆ, ರಾಜ್ಯದಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗುವುದರ ಬಗ್ಗೆ ರಾಜ್ಯಮಟ್ಟದ ರಸ್ತೆ ಸುರಕ್ಷಣಾ ಸಮಿತಿ ಏನಿದೆ, ಅದು ಅಧ್ಯಕ್ಷ ನಾನೇ ಆಗಿದ್ದೇನೆ. ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳ ಸಭೆಯನ್ನು ಪ್ರತಿತಿಂಗಳೂ ನಾನು ಮಾಡುತ್ತಿದ್ದೇನೆ. ಅದರಲ್ಲಿ ಗೃಹ ಕಾರ್ಯದರ್ಶಿಯವರಿದ್ದಾರೆ, ಡಿಜಿಪಿಯವರಿದ್ದಾರೆ, ಪಿಡಬ್ಲ್ಯೂಡಿ ಕಾರ್ಯದರ್ಶಿಯವರಿದ್ದಾರೆ, ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳನ್ನು ಕರೆಯಿಸಿ ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕೂಡ ನಾನು ಮಾಡುತ್ತಿದ್ದೇನೆ. ಕುಡಿದು ವಾಹನ ಚಾಲನೆ ಮಾಡುವ ಚಾಲಕರ ಲೈಸೆನ್ಸ್ ಅನ್ನು ರದ್ದು ಮಾಡುವ

ದೃಷ್ಟಿಯಿಂದ, ಈ ಲೈಸೆನ್ಸ್‌ಗಳನ್ನು ಕೊಡುವುದರಲ್ಲೂ ಬಿಗಿ ಮಾಡಬೇಕು ಮತ್ತು ಇದನ್ನು ಬಹಳ ಕಟ್ಟುನಿಟ್ಟಾಗಿ ಎನ್‌ಫೋರ್ಸ್ ಮಾಡಲೇ ಬೇಕೆನ್ನುವ ಒಂದು ಸೂಚನೆಯನ್ನು ನಾನು ಈಗಾಗಲೇ ಕೊಟ್ಟಿದ್ದೇನೆ. ನಿರ್ದಿಷ್ಟ ಇನ್‌ಸ್ಟೆನ್ಸ್‌ಗಳನ್ನು ಮಾನ್ಯ ಸದಸ್ಯರು ಗಮನಕ್ಕೆ ತಂದರೆ ನಾನು ಅದರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀ ಎನ್. ಯೋಗೀಶ್‌ಭಟ್ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಸ್ಪಷ್ಟೀಕರಣ ಬೇಕಾಗಿದೆ. ಮಾನ್ಯ ಮಂತ್ರಿಗಳು ಏನು ಹೇಳಿಕೆಯನ್ನು ಕೊಡುತ್ತಿದ್ದಾರೆ ಅದರ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ರಸ್ತೆ ಅಘಾತವಾಗಿ ಏಳೆಂಟು ಅರ್ಜಿಗಳಿದ್ದರೂ ಕೂಡ ಒಂದೇ ಒಂದಕ್ಕೆ ಪರಿಹಾರ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಕಾರಣವೇನೆಂದರೆ ಸ್ಪಷ್ಟವಾದ ಒಂದು ನಿರ್ದೇಶನವನ್ನು ಅಧಿಕಾರಿಗಳಿಂದ ಕೊಡುವುದಕ್ಕೆ ಸಾಧ್ಯವಾಗಲಿಲ್ಲ ಎನ್ನುವ ಕಾರಣದಲ್ಲಿ ಸನ್ಮಾನ್ಯ ಜಿಲ್ಲಾಧಿಕಾರಿಗಳು ನೇರವಾಗಿ ಪತ್ರವ್ಯವಹಾರ ಮಾಡಿದರೂ ಕೂಡ ಅದಕ್ಕೆ ಉತ್ತರ ಸಿಕ್ಕಿಲ್ಲ. ಕಳೆದ ವರ್ಷ ಆಟೋ ರಿಕ್ಷಾ ಚಾಲಕರಿಗೆ ಯಾವುದೇ ಪರಿಹಾರ ನಮ್ಮಲ್ಲಿ ಸಿಕ್ಕಿಲ್ಲ, ಸರ್ಕಾರ ಆದೇಶ ಬರೀ ಘೋಷಣೆಯಲ್ಲಿ ಮಾತ್ರ ಉಳಿದಿದೆ, ಇದರ ಬಗ್ಗೆ ವಿವರಣೆ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಅದು ಘೋಷಣೆ ರೂಪದಲ್ಲಿಲ್ಲ, ಕಳೆದ ವರ್ಷ ಅದಕ್ಕೆ ಹಣವನ್ನು ಕೂಡ ಒದಗಿಸಿದ್ದೇವೆ. ಹದಿನೈದು ಪ್ರಕರಣಗಳು ಈ ರೀತಿ ವರದಿಯಾಗಿವೆ ಎನ್ನುವ ಒಂದು ವರದಿಯನ್ನು ನಮಗೆ ಅಧಿಕಾರಿಗಳು ತಿಳಿಸಿದ್ದಾರೆ. ಅದರಲ್ಲೇ ಅವರು ಹೇಳಿದ್ದುದು ಕೂಡ ಬರಬಹುದು. ಅಲ್ಲಿ ಅಪಘಾತವಾಗಿ, ಅವರು ಅಲ್ಲಿ ಸತ್ತಿದ್ದರೆ ಹಣ ಕೊಡುವುದರಲ್ಲಿ ಸ್ವಲ್ಪ ತಡವಾಗಿರಬಹುದು, ಕ್ಷಮೆ ಯಾಚಿಸಿ. ದುಡ್ಡನ್ನು ಕೊಡಿಸುತ್ತೇನೆ.

ಅಘನಾಶಿನಿ ನದಿಯಿಂದ ಚಿಪ್ಪು ತೆಗೆಯುವುದು.

143 - ಡಾ// ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಪರಿಸರ, ಜೀವಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಘನಾಶಿನಿ ನದಿಯಲ್ಲಿ ಚಿಪ್ಪು ತೆಗೆಯಲು ಪರವಾನಗಿ ಕೊಡಲಾಗಿದೆಯೇ?

ಆ) ಹಾಗಿದ್ದಲ್ಲಿ, ದೊಡ್ಡ ಪ್ರಮಾಣದಲ್ಲಿ ಚಿಪ್ಪು ತೆಗೆಯುವುದರಿಂದ ಪರಿಸರಕ್ಕೆ ಹಾನಿಯಾಗುವುದಿಲ್ಲವೆ?

ಶ್ರೀ ಬಸವರಾಜ್ ನೀ. ಶಿವಣ್ಣನವರ್ (ಪರಿಸರ, ಜೀವಶಾಸ್ತ್ರ,ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯಸಚಿವರು) :

ಅ) ಪರಿಸರ ಇಲಾಖೆಯು ಅನುಮತಿ ಕೊಟ್ಟಿಲ್ಲ. ಕೆಲವರು ಗಣಿ ಇಲಾಖೆಯ ಅನುಮತಿ